ಯರಮರಸ್ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಕಾರ್ಮಿಕರು ಮೃತಪಟ್ಟಿರುವುದು

1793 (2007); ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ರಾಯಚೂರು ಜಿಲ್ಲೆಯ ಯರಮರಸ್ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಇತ್ತೀಚೆಗೆ ಕೆಲವು ಅವಘಡಗಳು ಸಂಭವಿಸಿ ಕೆಲವು ಕಾರ್ಮಿಕರು ಮೃಪಟ್ಟಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಅವಘಡಗಳಿಂದ ಮೃಪಟ್ಟ ಕಾರ್ಮಿಕರ ಸಂಖ್ಯೆ ಎಷ್ಟು;

ಇ) ಈ ಅವಘಡಗಳಿಂದ ಮೃತಪಟ್ಟ ಕಾರ್ಮಿಕರಿಗೆ ಸರ್ಕಾರ ಪರಿಹಾರ ಧನವನ್ನೇನ್ದರೂ ನೀಡಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಪರಿಹಾರವನ್ನು ನೀಡಲಾಗಿದೆ;

ಉ) ಆಗಿಂದಾಗ್ಗೆ, ಈ ರೀತಿಯ ಅವಘಡಗಳು ಸಂಭವಿಸಲು ಕಾರಣಗಳೇನು;

ಊ) ಈ ರೀತಿಯ ಅವಘಡಗಳು ಸಂಭವಿಸಲು ಕಾರಣಕರ್ತರಾದ ಕಂಪನಿ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಹೌದು.

ಆ) 03 (ಮೂರು)

ಇ) ಮೃತಪಟ್ಟ ಕಾರ್ಮಿಕರ ಅವಲಂಭಿತರಿಗೆ ಸರ್ಕಾರದಿಂದ ಪರಿಹಾರ ಧನ ನೀಡಿರುವುದಿಲ್ಲ. ಬದಲಾಗಿ ಈ ಅವಘಡಗಳಿಂದ ಮೃತಪಟ್ಟ ಕಾರ್ಮಿಕರ ಅವಲಂಭಿತರಿಗೆ ಗುತ್ತಿಗೆದಾರರ ಕಂಪನಿ ವತಿಯಿಂದ ಪರಿಹಾರ ಧನ ನೀಡಲಾಗಿದೆ.

ಈ) ಮೃತಪಟ್ಟ ಕಾರ್ಮಿಕರ ಅವಲಂಭಿತರಿಗೆ ಗುತ್ತಿಗೆದಾರರ ಕಂಪನಿ ವತಿಯಿಂದ ಒಟ್ಟು ₹ 53,38,611/– ಗಳನ್ನು ಪರಿಹಾರ ಧನ ನೀಡಲಾಗಿದೆ. (ಮೂರು ಮೃತಪಟ್ಟ ಕಾರ್ಮಿಕರಿಗೆ ಸೇರಿಸಿ)

ಉ) ಗುತ್ತಿಗೆದಾರರು ಕೆಲಸ ವೇಳೆಯಲ್ಲಿ ಸುರಕ್ಷತಾ ಕ್ರಮಗಳನ್ನು ಪಾಲಿಸುವಲ್ಲಿ ನಿರ್ಲಕ್ಷತನದಿಂದ ಅವಘಡಗಳು ಸಂಭವಿಸಲು ಕಾರಣವಾಗಿವೆ.

ಊ) 1) ಆರಕ್ಷಕ ಠಾಣೆಯಲ್ಲಿ ಈ ಬಗ್ಗೆ ಪ್ರಕರಣಗಳು ದಾಖಲಾಗಿದ್ದು ವಿಚಾರಣೆ ನಡೆಸಲಾಗುತ್ತಿದೆ. [ಎಫ್ಐಆರ್ ನಂ. 0009/2015 ದಿನಾಂಕ: 16.01.2015 ಮತ್ತು ಎಫ್ಐಆರ್ ನಂ. 0015/2015 ದಿನಾಂಕ: 27.01.2015]

2) ಅವಘಡಗಳು ಸಂಭವಿಸಲು ಕಾರಣ ಕರ್ತರಾದ ಕಂಪನಿಯವರಿಗೆ ಸುರಕ್ಷತೆಯ ಬಗ್ಗೆ ಕ್ರಮ ತೆಗೆದುಕೊಂಡು ಇನ್ನು ಮುಂದೆ ಈ ರೀತಿ ಅವಘಡಗಳು ಜರುಗದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಹೊಸದಾಗಿ ಕೃಷಿ ಕಾಲೇಜನ್ನು ಮಂಜೂರು ಮಾಡುವ ಬಗ್ಗೆ

1794 (2070); ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ಹಗರಿಬಮ್ಮನಹಳ್ಳಿಗೆ ಕೃಷಿ ಕಾಲೇಜನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿಯೇ ಮಂಜೂರಾತಿ ನೀಡಲಾಗುವುದೇ;

ಇ) ಹಾಗಿದ್ದಲ್ಲಿ, ಪಟ್ಟಣದ ಯಾವ ಭಾಗದಲ್ಲಿ ಎಷ್ಟು ವಿಸ್ತೀರ್ಣದ ಜಾಗವನ್ನು ಕೃಷಿ ಕಾಲೇಜಿಗಾಗಿ ಗುರುತಿಸಲಾಗಿದೆ;

ಈ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿಯೆ ಕಾಲೇಜು ಕಟ್ಟಡದ ನಿರ್ಮಾಣಕ್ಕೆ ಅನುದಾನವನ್ನು ಬಿಡುಗಡೆ ಮಾಡಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗುವುದೇ?